1104 (1563)

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿರುವ ಹೊಗೆ ತಪಾಸಣೆ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಹೊಸದಾಗಿ ಈ ಕೇಂದ್ರಗಳನ್ನು ತೆರೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಬಳ್ಳಾರಿ ಜಿಲ್ಲೆಯಲ್ಲಿರುವ ದ್ವಿಚಕ್ರ ಹಾಗೂ ಇತರೆ ವಾಹನಗಳೇಷ್ಟು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 3 ವಾಹನ ವಾಯು ಮಾಲಿನ್ಯ ಪರೀಕ್ಷಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಆ) ವಾಹನ ವಾಯು ಮಾಲಿನ್ಯ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಕರ್ನಾಟಕ ಮೋಟಾರು ವಾಹನ ನಿಯಮಾವಳಿಗಳು 1989ರ ನಿಯಮ 231 (ಬಿ)ರ ಅಡಿಯಲ್ಲಿ ನಿಯಮಗಳನ್ನು ರೂಪಿಸಲಾಗಿದೆ. ಸದರಿ ನಿಯಮಗಳ ಅನುಸಾರ ಅರ್ಜಿ ಸಲ್ಲಿಸಿ, ನಿಯಮದ ಇತರೆ ನಿಬಂಧನೆಗಳನ್ನು ಪೂರೈಸಿದಲ್ಲಿ ಅಂತಹ ಅರ್ಜಿದಾರರಿಗೆ ವಾಹನ ವಾಯು ಮಾಲಿನ್ಯ ಪರೀಕ್ಷಣಾ ಕೇಂದ್ರ ಸ್ಥಾಪಿಸಲು ಅನುಜ್ಞಾ ಪತ್ರ ನೀಡಲಾಗುವುದು.

ಇ) ಬಳ್ಳಾರಿ ಜಿಲ್ಲೆಯಲ್ಲಿ ದಿನಾಂಕ: 28-02-1998ರಂತೆ ಒಟ್ಟು 56,214 ದ್ವಿಚಕ್ರ ವಾಹನಗಳು ಹಾಗೂ 19,325 ಇತರೆ ವರ್ಗದ ವಾಹನಗಳು ಇವೆ.

ವಿಷಯ: ಆರಾಧನ ಯೋಜನೆಯಲ್ಲಿ ಬಿಡುಗಡೆಯಾದ ಹಣ.

1105 (1630)

ಶ್ರೀ ಯು.ಜಿ.ಬಣಕಾರ (ಹಿರೇಕೆರೂರು): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ಆರಾಧನಾ ಯೋಜನೆಯಲ್ಲಿ ಬಿಡುಗಡೆ ಮಾಡಿದ ಹಣ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಈ ದರದಲ್ಲಿ ವಿಧಾನ ಸಭಾ ಕ್ಷೇತ್ರವಾರು ವಿಂಗಡಣೆ ಮಾಡಲಾಗಿದೆಯೇ?

ಶ್ರೀ ಬಿ.ಮುನಿಯಪ್ಪ (ಮುಜರಾಯಿ ಸಚಿವರು):

ಅ) ರೂ. 5.00 ಕೋಟಿಗಳು (ಪಟ್ಟಿ ಲಗತ್ತಿಸಿದೆ)

ಆ) ಹೌದು, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಾತ್ರ ತಾಲ್ಲೂಕು ವಾರಿನಂತೆ (ವಿಧಾನ ಸಭಾ ಕ್ಷೇತ್ರವು ಒಂದು ತಾಲ್ಲೂಕ್‌ಗಿಂತ ಹೆಚ್ಚಿನ ವ್ಯಾಪ್ತಿ ಇರುವುದರಿಂದ)

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕು	ಒಟ್ಟು ವಿಧಾನ ಸಭಾ ಕ್ಷೇತ್ರ	ಬಿಡುಗಡೆ ಮಾಡಿದ ಮೊತ್ತ ರೂ. ಲಕ್ಷಗಳಲ್ಲಿ
1.	ಬೆಂಗಳೂರು ನಗರ	2	15	32,49,450-00
				+ 1,00,000-00
2.	ಬೆಂಗಳೂರು ಗ್ರಾಮಾಂತರ	8	10	21,66,300-00
3.	ತುಮಕೂರು	10	13	28, 16, 190-00
4.	ಕೋಲಾರ	11	12	25,99,560-00
				+ 75,000-00
5.	ಚಿತ್ರದುರ್ಗ	9	11	3,82,930-00
6.	ಮೈಸೂರು	12	16	34,66,080-00
7.	ಮಂಡ್ಯ	7	9	19,49,670-00
8.	ದಕ್ಷಿಣ ಕನ್ನಡ	8	15	32,49,450-00
9.	ಕೊಡಗು	3	3	6,49,890-00
10.	ಹಾಸನ	8	8	17, 33,040-00
11.	ಚಿಕ್ಕಮಗಳೂರು	7	6	15, 16,410-00
12.	ಶಿವಮೊಗ್ಗ	9	10	21,66,300-00
13.	ಬೆಳಗಾಂ	10	18	38,99,340-00
14.	ಧಾರವಾಡ	17	18	38,99,340-00
15.	ಬಿಜಾಪುರ	11	15	32,49,450-00
16.	ಉತ್ತರ ಕನ್ನಡ	11	6	23,82,930-00
17.	ಗುಲ್ಬರ್ಗಾ	10	13	28, 16, 190-00
18.	ಬಳ್ಳಾರಿ	8	9	19,49,670-00
19.	ರಾಯಚೂರು	9	11	23,82,930-00
20.	ಬೀದರ್	5	6	12,99,880-00
	ಒಟ್ಟು	174	224	5,00,00,000-00